
# ಹದ್ದು




ಬೆಳಗಿನಿಂದ ಸಂಜೆಯ ತನಕ
ನಿನ್ನೆ ಒಂದು ರಣಹದ್ದು ಸುತ್ತುತ್ತಲೇ ಇತ್ತು
ಪಕ್ಕದಲಿ ನೆಲೆಸಿರುವವನ
ಮನೆಯ ನೆತ್ತಿಯ ಮೇಲೆ

ಹಣಿಕಿ ನೋಡಿದರೆ ಒಮ್ಮೆ ಹೊರಬಂದರೆ
ಛಕ್ಕನೇ ಎತ್ತಿ ಗಗನದೆಡೆ ನೆಗೆಯಲು
ಕೊಕ್ಕುಗಳ ಬಿಚ್ಚಿ ಕಾಯುತ್ತಿತ್ತು

ನೋಡುತ್ತ ಜೀವ ನಲುಗುತ್ತಿತ್ತು
ಆಗದೇ ಬಿಟ್ಟು ಹೋಗಲು ಎಲ್ಲ
ಮೌನ ಹಲುಬುತ್ತಿತ್ತು

ಒಕ್ಕಣ್ಣ ಹದ್ದು
ಕೆಳಗೆ ಇಳಿವಾಗ ಮಾಡುತ್ತ ಘರಘರ ಸದ್ದು
ತಪ್ಪಿ ಗೊಂದಲದೊಳಗೆ ನನ್ನ ಮನೆ ಮೇಲೆ ಬಿದ್ದು
ಎತ್ತಿಕೊಳದೇ ಹೊರಗೆ ನೋಡುತ್ತ ನಿಂತವನನ್ನು?



ಭಯದ ಹಯದ ಮೇಲೆ ಪವಡಿಸಿದ್ದೇನೆ
ಬಂಧಿತನಾಗಿದ್ದೇನೆ,
ಕುದುರೆ ದಿಕ್ಕೆಟ್ಟು ಓಡುತಿದೆ ಸುತ್ತುತಿದೆ
ಇತ್ತ ಕಡೆ ಈ ಮನೆ ಅತ್ತ ಕಡೆ ಆ ಮನೆ
ಗಲಿಬಿಲಿಗೊಂಡು ಕೇಳುತ್ತದೆ ಯಾ ಮನೆ

ಕಣ್ಣಿಗೆ ಪಟ್ಟಿ ಬಿಗಿದುಕೊಂಡಿದ್ದೇನೆ
ಆದರೂ ಒಳಗೆ
ಒಳಗೊಳಗೇ ದಿಟ್ಟಿಸುತ್ತಿದ್ದೇನೆ
ಬಲು ಕಠಿಣ ಕಾಯುವ ಕರ್ಮ
ಕೊನೆಗಾಲದಲ್ಲಿ.

**● ಸಿದ್ಧಲಿಂಗ ಪಟ್ಟಣಶೆಟ್ಟಿ**

ಕಲೆ: ವಾಗೀಶ ಹೆಗಡೆ

